ಸಂಜೆಯಾಗುತ್ತದೆ ಬಸ್ಸಿಳಿದು ಬರುವಳು
ಸೊಸೆ; ಟೀ ಸೋಸಿ ಬೆಳ್ಳಗೆ ಬೆಳಗಿದ ಕಪ್ಪು
ಇಡುತ್ತಾಳೆ ಮುದುಕಿ ಸೊಸೆಯ ಮುಂದೆ
ಅವಳು ಚೀಲ ಇಡುತ್ತಾಳೆ ಅತ್ತೆಯ ಮುಂದೆ
ಇಬ್ಬರೂ ಮಾತನಾಡುವುದಿಲ್ಲ; ಮತ್ತದೇ ಡಬ್ಬ
ಗಳ ಸೀಲು ಮುಚ್ಚಳ ತೆರೆದು ಅತ್ತೆ ತುಂಬುತ್ತಾಳೆ
ಒಂದೊಂದಾಗಿ; ಆವೊತ್ತೂ ಹೀಗೇ ಕಳೆದು
ಹೋಗುತ್ತದೆ ಯಾವತ್ತಿನಂತೆ

## ಇದಿರ ಮೆಚ್ಚಿಸಲಾಗದು

ಮೊದಲ ಪ್ರೇಮ
ವೆಂದರೆ ಮೊದಲ ಪ್ರೇಮ!
ಹೋಲಿಸಲಾರಿರಿ ವಿವರಿಸಲಾರಿರಿ
ಮನದಟ್ಟು ಮಾಡಿ ಇದಿರ ಮೆಚ್ಚಿಸಲಾರಿರಿ
ಬೆಳಗಿನಜಾವದ ಕನಸಂತೆ ಅದು
ದಿನಪೂರ್ತಿ ಇಷ್ಟವಾಗುತ್ತ ಕಾಡುವುದು



ಹೆಚ್ಚು ಹೇಳ ಹೊರಟರೆ
ಸೋಲುವುದು ಕವಿತೆ
ವಿಮಲಾತಿ ವಿಮಲ ಮೃದುಕೋಮಲ
ಶಬುದಗಳ ನೇಯ್ದರೂ ಸಮದೂಗದದು
ಮೊದಲ ಪ್ರೇಮದ ನವಿರಿಗೆ

ಕಡು ಬೇಸಿಗೆ
ಮಾಳಿಗೆಯೇರಿ ಹೊರಳುತ್ತ
ಕೇಳಿದ ಕಥೆಗಳ ನಿಮಗೇ ಕೇಳಿಸುತ
ಇರುವ ಗಾಳಿಯನೆ ಸೆರಗತುದಿಯಲಿ
ಚೆದುರಿಸುತ ಹಲುಬುತಿದ್ದೀರಿ ಎಂದಿಟ್ಟುಕೊಳ್ಳಿ
ಆಗಿಳಿದುಬಿಡುವನು ಒಮ್ಮಿಂದೊಮ್ಮೆಗೆ